day of March 1961, in respect of 'Capital Outlay on Improvement of Public Health'."

DEMAND No. 50.—APPROPRIATION TO IRRIGATION AND POWER DEVELOPMENT FUND.

80-*B. Appropriation to Irrigation and Power Development Fund.*

"That a sum not exceeding Rs. 9,00,000 be granted to the Government to defray the charges which will come in course of payment during the year ending 31st day of March 1961, in respect of 'Irrigation and Power Development Fund'."

DEMAND No. 51.—CAPITAL OUTLAY ON CIVIL WORKS.

"That a sum not exceeding Rs. 4,61,60,200 be granted to the Government to defray the charges which will come in course of payment during the year ending 31st day of March 1961, in respect of 'Capital Account of Civil Works outside the Renenue Account'."

DEMAND No. 53.—CAPITAL ACCOUNT OF OTHER WORKS OUTSIDE THE REVENUE ACCOUNT.

82. *Capital Account of other Works outside the Revenue Account.*

"That a sum not exceeding Rs. 12,00,000 be granted to the Government to defray the charges which will come in course of payment during the year ending 31st day of March 1961, in respect of 'Capital Account of other Works outside the Revenue Account'."

Members' Representation

*Sri V. SRINIVAS SHETTY (Coondapur).—I should like to make a request to the Hon'ble Chief Minister to let us know whether they are going to declare to-morrow as a Holiday. The second thing is, we are given to understand that this session will close on the 16th. Now, we are told that it is going to close on the 18th. Some people say it is 20th. The latest version is 23rd. We are very uncertain about it. We want to know definitely when we will be allowed to go home.

Sri B. D. JATTI (Chief Minister).—It is not the intention of the Government to declare to-morrow as a Holiday. The last day of the session is 18th. There will not be any session on the 19th.

2-00 P.M.

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ತಾವು ಮೂರು ದಿವಸಗಳಹಿಂದೆ ಪ್ರಶ್ನೆಗಳ ಬಗ್ಗೆ ಒಂದು ಆಶ್ವಾಸನ ವನ್ನು ಕೊಟ್ಟಿದ್ದಿರಿ ಮತ್ತು ಪ್ರಶ್ನೆಗಳಿಗೆ ಜಾಗ್ರತೆಯಾಗಿ ಉತ್ತರವನ್ನು ಸರಕಾರದವರು ಓದಗಿಸುತ್ತಾರೆ, ಆ ಬಗ್ಗೆ ಅಪ್ಪು ಕಾತರತೆ ಮಾಡಬೇಕಾಗಿಲ್ಲ ಎಂದು ಹೇಳಿದ್ದಿರಿ. ನನಗೆ ತಿಳಿದುಬಂದಿರುವ ಪ್ರಕಾರ ಇವೊತ್ತಿನ ದಿವಸವೂ ಪ್ರಶ್ನೋತ್ತರಗಳ ಕಾಲವಿರಲಿಲ್ಲ. ನುಮಾರು ನೂರುಪ್ರಶ್ನೆಗಳಿಗೆ ಇನ್ನೂ ಉತ್ತರಬಂದಿಲ್ಲ ಎಂದು ಹೇಳಬೇಕಾಗಿದೆ. ಈ ನಂದರ್ಭದಲ್ಲಿ ಒಬ್ಬ ಸದಸ್ಯರಿಗೆ ಹತ್ತು ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಕೇಳುವುದಕ್ಕೆ ಅವಕಾಶವಿದೆ. ಇದರಲ್ಲೀಗ ಒಂದು ದೊಡ್ಡ ಕೊರತೆ ಬಂದಿದೆ. ಈ ಅಸೆಂಬ್ಲಿ ಸರಕಾರದ ನಡೆವಳಿಕೆಗಳನ್ನು ಒಂದು ಹತೋಟಿಯಲ್ಲಿ ಇಡತಕ್ಕ ಅಧಿಕಾರವನ್ನು ಪಡೆದಿದೆ. ಇಂತಹ ಅಸೆಂಬ್ಲಿಯಲ್ಲಿ ಇದನ್ನು ಡಿಸ್‌ಕಸ್ ಮಾಡಲಕ್ಕೆ ಬರುತ್ತದೆ. ಪ್ರಶ್ನೆಗಳನ್ನು ಕಳುಹಿಸಿ ಅದಕ್ಕೆ ಉತ್ತರಗಳನ್ನು ಪಡೆಯುವುದು ಪ್ರತಿಯೊಬ್ಬ ಸದಸ್ಯರ ಹಕ್ಕುಬಾಧ್ಯತೆ ಗಳಿಗೆ ಒಳಪಟ್ಟಿರುವ ವಿಚಾರ. ಈ ಹಕ್ಕುಬಾಧ್ಯತೆ ಎನ್ನುವುದು ಸದಸ್ಯರ ಒಂದು ಪ್ರಿವಿಲೇಜು ಇದರ ಜೊತೆಗೆ ಕೆಲವು ವೇಳೆ ಪ್ರಶ್ನೆಗಳನ್ನು ಕಳುಹಿಸಿರು ವುದಕ್ಕೆ evasive answers ನ್ನೂ ಇಲ್ಲವೇ ನಮಂಜಸವಲ್ಲದ ಉತ್ತರವನ್ನೂ ಕೊಡಲಾಗುತ್ತಿದೆ. ಇದರ ಬಗ್ಗೆ ಡಿಸ್‌ಕಸ್ ಮಾಡುವುದು ಅಗತ್ಯವಾಗಿದೆ. ಅಸೆಂಬ್ಲಿಯ ಸದಸ್ಯರು ಕಳುಹಿಸಿರುವ ಪ್ರಶ್ನೆಗಳಿಗೆ ಉತ್ತರವೇಕೆ ಬರಲಿಲ್ಲ ಎನ್ನುವುದು ಖಚಿತವಾಗಿ ನಮಗೆ ಬೇಕಾಗಿದೆ. ಇಲ್ಲಿನ ಸದಸ್ಯರುಗಳು ಕೊಟ್ಟಿರುವ ಪ್ರಶ್ನೆಗಳಿಗೆ ಹದಿನೈದು ದಿವಸಗಳಷ್ಟು ಕಾಲಾವಕಾಶವನ್ನು ಕೊಟ್ಟಿದ್ದರೂ ಆದರಂತೆ ಉತ್ತರಗಳು ಬಾರದೆ ಇರುವುದು ಸರಿಯಲ್ಲ. ಇದರ ಬಗ್ಗೆ ವಿಚಾರಮಾಡಿ ಈ ಅಸೆಂಬ್ಲಿಯಲ್ಲಿ ಇದನ್ನು ಡಿಸ್‌ಕಸ್ ಮಾಡಿ ನಿಖರವಾದ ಒಂದು ನಿರ್ಧಾರ ಮಾಡುವುದು ಅಗತ್ಯವಾಗಿದೆ. ಅದಕ್ಕಾಗಿ ಅಧ್ಯಕ್ಷರ ಮೂಲಕ ನಾನು ಕೋರುತ್ತಿರುವುದು ಇದು ನಮ್ಮ ಹಕ್ಕು ಬಾಧ್ಯತೆಗಳಿಗೆ ಪೊಟುಕು ಮಾಡುವ ಪ್ರಯತ್ನ ಎಂದು ಹೇಳಬೇಕಾಗಿದೆ, ಅದಕ್ಕೋಸ್ಕರ ಈ ವಿಷಯ ವನ್ನು ಇಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡ ಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಈ ವಿಚಾರದಲ್ಲಿ ಚರ್ಚೆ ಮಾಡುವ ಪ್ರಸಂಗವೇನಿಲ್ಲ. ಈಗ ಎಷ್ಟು ಪ್ರಶ್ನೆಗಳು ಉಳಿದಿವೆ ಎನ್ನುವುದನ್ನು ನಾನು ನೋಡುತ್ತೇನೆ. ತಾವು

(ಅಧ್ಯಕ್ಷರು)

ಹೇಳುವಂತೆ 100 ಪ್ರಶ್ನೆಗಳಿಗೆ ಉತ್ತರಬಂದಿಲ್ಲ ಎಂಬುದು ಅಷ್ಟು ಸರಿ ಕಾಣುವುದಿಲ್ಲ. ಈಗಾಗಲೇ ಕೆಲವು ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ನಾಳೆ, ನಾಡಿದ್ದು ಇನ್ನೂ ಎರಡು ಮೂರು ಲಿಸ್ಟುಗಳು ಬರಬಹುದು. ಸರಕಾರದವರ ಕಡೆಯಿಂದ ಹದಿನೈದು ದಿವಸದೊಳಗಾಗಿ ಮತ್ತು ಒಂದು ತಿಂಗಳೊಳಗಾಗಿ ಬಾರದೆ ಇರುವ ಪ್ರಶ್ನೆಗಳ ಉತ್ತರಗಳು ಏನಿವೆ ಎನ್ನುವುದನ್ನು ಮತ್ತು ಇದರಲ್ಲೇನಾದರೂ ಲೋಪವಿದ್ದರೆ ಅದರ ಬಗ್ಗೆ ನಾನು, ಸಭಾನಾಯಕರೊಡನೆ, ಪ್ರತಿಪಕ್ಷದ ನಾಯಕರೊಡನೆ ಮತ್ತು ಇನ್ನಿತರ ಕೆಲವು ಜನ ಸದಸ್ಯರೊಂದಿಗೆ ಚರ್ಚೆ ಮಾಡುತ್ತೇನೆ.

ಶ್ರೀ ಕೆ. ಕೆಂಚಪ್ಪ.—ತಾವು ಸರಕಾರದವರು ಉತ್ತರ ಕೊಡದೇ ಹೋದರೆ ನಾನು ಸರಕಾರದವರನ್ನು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೀರಿ. ನಾನು ಹೇಳುವುದು ಈಗ ಸರಕಾರದವರು ಉತ್ತರ ಕೊಡುತ್ತಾರೋ ಇಲ್ಲವೋ ಅದನ್ನು ಮೊದಲು ತಿಳಿಸಬೇಕಾಗಿದೆ. ಇದು ಅಸೆಂಬ್ಲಿಯ ಎಲ್ಲ ಸದಸ್ಯರ ಹಕ್ಕು ಬಾಧ್ಯತೆಗೆ ಸೇರಿದ್ದು. ಇಷ್ಟು ದಿವಸಗಳಿಂದ ಹೇಳುತ್ತಿದ್ದರೂ ಇನ್ನೂ ಉತ್ತರಗಳನ್ನು ಕೊಟ್ಟಿಲ್ಲ. ಇದನ್ನು ನಾನು ಎಷ್ಟೋ ಸಾರಿ ತಮ್ಮಲ್ಲಿ ಬೇಡಿಕೊಂಡೆ. ಈ ಅಸೆಂಬ್ಲಿಯಲ್ಲಿ ಸರಕಾರದ ಆಡಳಿತವನ್ನು ಒಂದು ಹತೋಟಿಯಲ್ಲಿಟ್ಟುಕೊಂಡು ಅದು ಸರಿಯಾಗಿ ಹೋಗುತ್ತಿದೆಯೇ ಇಲ್ಲವೇ ಎನ್ನುವ ಹಕ್ಕು ಈ ಸಭೆಗೆ ಇದೆ. ಈ ಹಕ್ಕೇ ಹೋಗುತ್ತಿದ್ದರೆ ಇದನ್ನು ಯಾವ ರೀತಿಯಾಗಿ ಬಗೆಹರಿಸಬೇಕು ಎನ್ನುವ ವಿಚಾರವನ್ನು ತಾವೇ ಹೇಳಬೇಕಾಗಿದೆ.

ಅಧ್ಯಕ್ಷರು.—ಇವು ಸಾಮಾನ್ಯವಾದ ವಿಷಯಗಳು. ಇದರ ಬಗ್ಗೆ ಯಾವ ಯಾವುದೋ ಮಾತುಗಳನ್ನು ತಾವು ಹೇಳುತ್ತಿದ್ದೀರಿ. ಒಂದು ತಿಂಗಳಿಗೆ ಮೇಲ್ಪಟ್ಟು ಉತ್ತರ ಕಳುಹಿಸದೆ ಇರುವ ಪ್ರಶ್ನೆಗಳಿಗೆ ಇನ್ನು ನಾಲ್ಕೈದು ದಿನದೊಳಗೇ ಉತ್ತರ ಬರುವ ನಿರೀಕ್ಷೆ ಇದೆ, ಇನ್ನು ಮೂರು ನಾಲ್ಕು ಲಿಸ್ಟುಗಳಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರ ಬರುತ್ತದೆ. ಸುಮಾರು 500 ಪ್ರಶ್ನೆಗಳಿಗೆ ಈಗಾಗಲೇ ಉತ್ತರ ಕೊಟ್ಟಿದ್ದಾಯಿತು. ಈ ಸಭೆಯಲ್ಲಿ ಯಾವುದಾದರೂ ಪ್ರಶ್ನೆ ಹಾಕಿದುದಕ್ಕೆ ಉತ್ತರ ಬಾರದಿದ್ದರೆ ಅಂತಹ ಪ್ರಶ್ನೆಗಳ ಬಗ್ಗೆ ನಾನು ವಿಚಾರ ಮಾಡುತ್ತೇನೆ. ನನ್ನಲ್ಲಿರುವ ಸ್ಟೇಟುಮೆಂಟಿನ ಪ್ರಕಾರ ನಿನ್ನೆಯವರೆಗೆ ಇನ್ನು ಉತ್ತರಗಳು ಬರಬೇಕಾದುವು ಕೇವಲ 55 ಪ್ರಶ್ನೆಗಳು ಮಾತ್ರ ಉಳಿದಿವೆ.

The number of answers still due from Government upto the 13th April 1960 is 55. ಇವೆಲ್ಲ ಉಳಿದಿರುವ ಪ್ರಶ್ನೆಗಳಿಗೆ ಉತ್ತರಗಳು ಕಡೆಯ ದಿನದೊಳಗೇ ಬರಬಹುದೆಂದು ನನಗೆ ಕಾಣಿಸುತ್ತದೆ.

ಶ್ರೀ ಕೆ. ಕೆಂಚಪ್ಪ.—ಒಂದು ಪ್ರಶ್ನೆಗೆ ಉತ್ತರ ಬಾರದಿದ್ದರೂ ನಮ್ಮ ಹಕ್ಕುಬಾಧ್ಯತೆಗೆ ಚ್ಯುತಿ ಬರುತ್ತದೆ.

ಅಧ್ಯಕ್ಷರು.—ನಿಮ್ಮ ಮಾತನ್ನೂ ನಾನು ಒಪ್ಪುತ್ತೇನೆ. ಮೆಂಬರುಗಳಿಗೆ ಈ ಒಂದು ರೈಟ್ ಇದೆ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬಯಸುವುದು. ಯಾವುದಾದರೂ ತಮ್ಮ ಪ್ರಶ್ನೆಯೊಂದಕ್ಕೆ ಉತ್ತರ ಬಾರದಿದ್ದರೆ ಅದನ್ನೂ ವಿಚಾರ ಮಾಡುತ್ತೇನೆ.

DEMAND NO. 40.—COMMUNITY DEVELOPMENT, ETC.

63-*B. Community Development Projects, National Extension service and Local Development Works.*

Sri H. C. LINGA REDDY (Deputy Minister for Planning).—Sir, on the recommendation of the Governor of Mysore, I beg to move :

> "That a sum not exceeding Rs. 2,99,07,000 be granted to the Government to defray the charges which will come in course of payment during the year ending 31st day of March 1961, in respect of 'Community Development Projects, National Extension Service and Local Development Works'."

Mr. SPEAKER.—Motion moved :

> "That a sum not exceeding Rs. 2,99,07,000 be granted to the Government to defray the charges which will come in course of payment during the year ending 31st day of March 1961, in respect of 'Community Development Projects, National Extension Service and Local Development Works'."

Demands Nos. 2, 32 and 45 are also before the House.

Sri C. J. MUCKANNAPPA.—At least let them move all the Demands, Sir.

Mr. SPEAKER.—Demand No. 63-B Community Development, 7 Land Revenue, 54 Famine and 65 Payment of Compensation to land holders they are all before the House.

Sri C. M. ARUMUGHAM (K.G.F.).—This is the first time that a Deputy Minister is moving a Demand which is for two crores. There is Revenue Demand which is for 3½ crores.

ಅಧ್ಯಕ್ಷರು.—ಎಲ್ಲಾ ಡಿಮ್ಯಾಂಡುಗಳೂ ಈಗ ಚರ್ಚೆಗಾಗಿ ಸಭೆಯ ಮುಂದೆ ಇವೆ.

Sri C. J. MUCKANNAPPA.—I quite agree with the Speaker.

Mr. SPEAKER.—63-B, pertains to the Hon'ble the Chief Minister. On